**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು**

**ಸಿ.ಸಿ. ನಂ.2247/2023**

**ದಿನಾಂಕಃ15-07-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು**

| | | | |
|---|---|---|---|
| ಸಾಕ್ಷಿಯ ಹೆಸರು | ಃ | ಟಿ ಇ ರಾಜಪ್ಪ | ಚಾಸಾ-4 ಪ್ರಾಸಾ-4 |
| ತಂದೆಯ ಹೆಸರು | ಃ | ಈಶ್ವರಪ್ಪ | |
| ವಯಸ್ಸು | ಃ | 43 ವರ್ಷ | |
| ಉದ್ಯೋಗ | ಃ | ಹೆಚ್ ಸಿ, ಸಿಂಗಟಗೆರೆ ಪೊಲೀಸ್ ಠಾಣೆ | |
| ವಾಸ | ಃ | ಸಿಂಗಟಗೆರೆ | |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ನಾನು 2019 ರಿಂದ ಈ ವರೆಗೆ ಸಿಂಗಟಗೆರೆ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 01.04.2023 ರಂದು ನಾನು, ಚಾಸಾ 1, ಚಾಸಾ 5 ರಿಂದ 7 ರವರು ಆಲಘಟ್ಟ ಚಟ್ನಹಳ್ಳಿ ರಸ್ತೆಯಲ್ಲಿ ಗಸ್ತಿನಲ್ಲಿದ್ದಾಗ ಮಧ್ಯಾಹ್ನ 1.30 ಗಂಟೆಗೆ ಬಾತ್ಮೀದಾರರು ಚಾಸಾ 1 ರವರಿಗೆ ಕರೆ ಮಾಡಿ ಆಲಘಟ್ಟ ಗ್ರಾಮದ ಸೇವಲಾಲ್ ದೇವಸ್ಥಾನಕ್ಕೆ ಹೋಗುವ ರಸ್ತೆಯಲ್ಲಿ ಒಬ್ಬ ಮಹಿಳೆ ಮದ್ಯ ಮಾರಾಟ ಮಾಡುತ್ತಿರುವುದಾಗಿ ಮಾಹಿತಿ ಬಂದಿರುತ್ತದೆ. ಸದರಿ ಮಾಹಿತಿನ್ನು ಚಾಸಾ 1 ರವರು ನಮಗೆ ತಿಳಿಸಿರುತ್ತಾರೆ.

ನಂತರ ದಾಳಿಯ ಸಲುವಾಗಿ ಇಲಾಖಾ ವಾಹನದಲ್ಲಿ ಹೊರಟು ಅದೇ ಊರಿನ ಚಾಸಾ 2, 3 ರವರಿಗೆ ಚಾಸಾ 1 ರವರು ನೋಟೀಸು ನೀಡಿ ಮಾಹಿತಿ ತಿಳಿಸಿ, ಅವರು ಒಪ್ಪಿದ ನಂತರ ಸದರಿಯವರೊಂದಿಗೆ ಮಾಹಿತಿ ಇದ್ದ ಸ್ಥಳಕ್ಕೆ ತಲುಪಿರುತ್ತೇವೆ, ನಂತರ ಇಲಾಖಾ ಜೀಪ್ ನಿಲ್ಲಿಸಿ ನೋಡಿದಾಗ ಅಲ್ಲಿ ಒಬ್ಬ ಮಹಿಳೆಯು ಕಪ್ಪು ಬಣ್ಣದ ಪ್ಲಾಸ್ಟಿಕ್ ಕವರ್ ಅನ್ನು ಹಿಡಿದುಕೊಂಡು ಮದ್ಯ ಮಾರಾಟ ಮಾಡುತ್ತಿದ್ದರು, ನಂತರ ಸಿಬ್ಬಂದಿಗಳು ಸುತ್ತುವರಿದು ಆಕೆಯನ್ನು ಹಿಡಿದು ವಿಚಾರಿಸಿದಾಗ ಆಕೆಯ ಹೆಸರು ನೀಲಾಬಾಯಿ ಎಂದು ತಿಳಿಸಿರುತ್ತಾರೆ.

ನಂತರ ಆಕೆಯ ಬಳಿ ಇದ್ದ ಕಪ್ಪು ಕವರ್ ಅನ್ನು ನೋಡಿದಾಗ ಅದರಲ್ಲಿ 90 ಎಂ ಎಲ್ 50 ರಾಜಾ ವಿಸ್ಕಿ ಪೌಚುಗಳು ಇತ್ತು. ಸದರಿ ಮಹಿಳೆಯ ಬಳಿ 100 ರೂ.ಹಣ ಇತ್ತು. ಹಣದ ಬಗ್ಗೆ ವಿಚಾರಿಸಿದಾಗ ಮದ್ಯ ಮಾರಾಟದಿಂದ ಬಂದ ಹಣ ಎಂದು ತಿಳಿಸಿರುತ್ತಾರೆ. ಮದ್ಯ ಮಾರಾಟಕ್ಕೆ ಪರವಾನಗೆ ಇದೆಯೇ ಎಂದು ವಿಚಾರಿಸಿದಾಗ ಇಲ್ಲ

ಎಂದು ತಿಳಿಸಿರುತ್ತಾನೆ. ನಂತರ ಚಾಸಾ 1 ರವರು ವರದಿ ತಯಾರು ಮಾಡಿ ಚಾಸಾ 6 ರವರ ಮುಖಾಂತರ ಠಾಣೆಗೆ ಕಳುಹಿಸಿಕೊಟ್ಟಿರುತ್ತಾರೆ. ಅದರಂತೆ ಪ್ರಕರಣ ದಾಖಲಾಗಿರುತ್ತದೆ.

ನಂತರ, ಠಾಣಾಧಿಕಾರಿಯವರಿಂದ ಪ್ರಕರಣ ಸಂಖ್ಯೆ ತಿಳಿದುಕೊಂಡಿರುತ್ತೇವೆ. ನಂತರ ಮಧ್ಯಾಹ್ನ 3.30 ರಿಂದ 4 ಗಂಟೆವರೆಗೂ ಪಂಚರ ಸಮಕ್ಷಮ ಮಹಜರ್ ಮಾಡಿ ಸದರಿ ವಸ್ತುಗಳು ಮತ್ತು ಹಣ ಅಮಾನತ್ತು ಪಡಿಸಿಕೊಂಡಿರುತ್ತೇವೆ. ನಂತರ, ಆರೋಪಿ ಮತ್ತು ಮಾಲುಗಳ ಸಮೇತ ಠಾಣೆಗೆ ಕರೆದುಕೊಂಡು ಹೋಗಿರುತ್ತೇವೆ. ಮಹಜರ್ ಕಾಲದಲ್ಲಿ ಫೋಟೋ ತೆಗೆದಿರುತ್ತೇವೆ.

ನಾನು ಈ ಬಗ್ಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಯು ಈಗಾಗಲೇ ಗುರುತಿಸಿರುವ ನಿಪಿ3 ರಲ್ಲಿನ ತನ್ನ ಸಹಿ ಗುರುತಿಸಿದ್ದು ಅದನ್ನು 3 ಡಿ ಎಂದು ಗುರುತಿಸಲಾಯಿತು.

ಸಾಕ್ಷಿಯು ಈಗಾಗಲೇ ಗುರುತಿಸಿರುವ ನಿಪಿ 4 ಫೋಟೋ ನೋಡಿ ತನ್ನ ಇರುವಿಕೆಯನ್ನು ಗುರುತಿಸಿದರು.

ಆರೋಪಿಯನ್ನು ನೋಡಿದಲ್ಲಿ ಗುರುತಿಸುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿದರು.

ಆ ದಿನ ಅಮಾನತ್ತು ಪಡಿಸಿಕೊಂಡ ಮದ್ಯ ಮತ್ತು ಹಣ ನೋಡಿದಲ್ಲಿ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಮು ಮಾ 1 ಮದ್ಯದ ಪೌಚುಗಳನ್ನು ನೋಡಿ ಗುರುತಿಸಿದರು. ಮು ಮಾ 2 ನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀಸವಾಲುಃ ಆರೋಪಿ ಪರ ಶ್ರೀ. ಹೆಚ್ ಎನ್ ಎಸ್ ವಕೀಲರಿಂದಃ**

**ಮಾಹಿತಿ ಬಂದಾಗ ನಾವು ಗಸ್ತಿನಲ್ಲಿ ಇದ್ದೆವು. ಆಗ ಸಮಯ 1.15 ಆಗಿತ್ತು.** ಗಸ್ತಿನಲ್ಲಿರುವಾಗ ಸಮಾನ್ಯವಾಗಿ ಎಲ್ಲರೂ ಸಮವಸ್ತ್ರದಲ್ಲಿ ಇರುತ್ತಾರೆ ಎಂದರೆ ಸಾಮಾನ್ಯವಾಗಿ ಇರುವುದಿಲ್ಲ. ನಿಪಿ 4 ರಲ್ಲಿ ಚಾಸಾ 6, 7 ಕಾಣುತ್ತಿಲ್ಲ ಎಂದರೆ ಸಾಕ್ಷಿಯು ಚಾಸಾ 6 ಠಾಣೆಗೆ ಹೋಗಿರುತ್ತಾರೆ, ಚಾಸಾ 7 ಜೀಪಿನಲ್ಲಿ ಇದ್ದರು. ನಿಪಿ 4 ನ್ನು ಠಾಣಾ ಸಿಬ್ಬಂದಿ ಸುರೇಶ್ ರವರು ತೆಗೆದಿರುತ್ತಾರೆ. ಸದರಿ ಸುರೇಶ್ ರವರ ಹೆಸರನ್ನು ಚಾಸಾ 1 ರವರ ವರದಿಯಲ್ಲಿ ನಮೂದು ಮಾಡಿಲ್ಲವೆಂದರೆ ಸರಿ. ಸುರೇಶ್ ಎಂಬುವವರು ಆ ದಿನ

ಗಸ್ತು ಕರ್ತವ್ಯದಲ್ಲಿ ಇರಲಿಲ್ಲ. ನಿಪಿ 3 ರಲ್ಲಿ ಸದರಿ ಸುರೇಶ್ ರವರ ಸಹಿ ಇಲ್ಲವೆಂದರೆ ಸರಿ. ನಿ ಪಿ 1 ನ್ನು ಚಾಸಾ 6 ರವರು ಬರವಣಿಗೆ ಮಾಡಿರುತ್ತಾರೆ. ನಿ ಪಿ 3 ನ್ನು ನಾನು ಬರವಣಿಗೆ ಮಾಡಿರುತ್ತೇನೆ. ನಿಪಿ 3 ನ್ನು ಠಾಣೆಯಲ್ಲಿ ಬರವಣಿಗೆ ಮಾರುತ್ತೇನೆ ಎಂದರೆ ಸರಿಯಲ್ಲ. ನಿಪಿ 3 ರಲ್ಲಿ ಬರೆದಿರುವ ವಿಚಾರಗಳನ್ನು ಹೇಳಲಾಗುವುದಿಲ್ಲ ಎಂದರೆ ಸರಿಯಲ್ಲ. ನಿಪಿ 3 ರಲ್ಲಿ ಬ್ಯಾಚ್ ನಂಬರ್, ತಯಾರಿಕ ದಿನಾಂಕ, ಕ್ರಮ ಸಂಖೆ ಹೇಳಲಾಗುವುದಿಲ್ಲ ದಾಖಲೆ ನೋಡಿ ಹೇಳಬಹುದು. ಅಮಾನತ್ತು ಪಡಿಸಿಕೊಂಡೆವು ಎಂದು ಹೇಳುವ ರೂ.100 ರ ಹಣ ಎಷ್ಟು ಮುಖ ಬೆಲೆಯ ನೋಟುಗಳು ಎಂದು ನನಗೆ ಗೊತ್ತಿಲ್ಲ. ನಿಪಿ 3 ದಸ್ತುರುದಾರನಾಗಿ ನನ್ನ ಸಹಿ ಇಲ್ಲವೆಂದರೆ ಸರಿ. ಸಾಕ್ಷಿಯು ನನ್ನ ಸಹಿ ಇರುತ್ತದೆ ಎಂದು ನುಡಿಯುತ್ತಾರೆ.

ಹರೀಶ್ ಬಿನ್ ತಿಮ್ಮಾನಾಯ್ಕ ಮತ್ತು ಮೂರ್ತಿನಾಯ್ಕ ಬಿನ್ ತಿಮ್ಮಾನಾಯ್ಕ ರವರು ನಿಪಿ3 ರ ಕಾಲದಲ್ಲಿ ಹಾಜರು ಇದ್ದರು. ಸದರಿಯವರಿಬ್ಬರ ಸಹಿ ನಿಪಿ 3 ರಲ್ಲಿ ಇಲ್ಲ ಎಂದರೆ ಸರಿ, ಆದರೆ ಅವರ ಹೇಳಿಕೆಯನ್ನು ಪಡೆದಿರುತ್ತೇವೆ. ಮು ಮಾ 1 ನ್ನು ಆರೋಪಿ ಮಾರಾಟ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಸುಳ್ಳು ಕೇಸಿಗೆ ಪೂರಕವಾಗಿ ಎಲ್ಲಾ ದಾಖಲೆಗಳನ್ನು ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ, ಈ ಕೇಸಿಗೂ, ಮು ಮಾ 1, 2 ಕ್ಕು ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಆ ದಿನ ನಾನು ಗಸ್ತು ಕರ್ತವ್ಯದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಮು ಮಾ 1 ರ ಚೀಟಿಯಲ್ಲಿ ನನ್ನ ಸಹಿ ಇಲ್ಲವೆಂದರೆ ಸರಿ.

**ಮರು ವಿಚಾರಣೆ : ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.